## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. **288/2020**

ಚಾಸಾ- 3 ಪ್ರಾಸಾ-4

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 09-01-2026

| | | |
|---|---|---|
| ಹೆಸರು | : | ಶ್ರೀಶೈಲ |
| ತಂದೆಯ ಹೆಸರು | : | ಸಿದ್ದಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಅಬಕಾರಿ ಉಪ ಅಧೀಕ್ಷಕರು |
| ವಾಸಸ್ಥಳ | : | ಯಲ್ಲಾಪುರ ಉಪವಿಭಾಗ ಕಾರವಾರ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಸೆಪ್ಟೆಂಬರ 2019 ರಿಂದ ಫೆಬ್ರವರಿ 2022 ರವರೆಗೆ ಅಬಕಾರಿ ನಿರೀಕ್ಷಕರಾಗಿ ಆಳಂದ ವಲಯದಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 21-04-2020 ರಂದು ಅಫಜಲಪುರ ತಾಲೂಕಿನ ಶಿರವಾಳ ಗ್ರಾಮದ ಬಾಳಪ್ಪ ತಂದೆ ಹಣಮಂತ ಇವರ ಪಾನಶಾಪ ಅಂಗಡಿಯಲ್ಲಿ ಕಳ್ಳಬಟ್ಟಿ ಸಾರಾಯಿ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ ಎಂಬ ಭಾತ್ಮಿ ಬಂದ ಮೇರೆಗೆ ಸಿಬ್ಬಂದಿಗಳಿಗೆ ತಿಳಿಸಿ ಸ್ಥಳೀಯ ಪಂಚರು ಲಭ್ಯವಿಲ್ಲದ ಪಕ್ಷದಲ್ಲಿ ದಾಳಿಗೆ ಪಂಚರಾಗಿ ಸಹಕರಿಸಲು ಇಬ್ಬರು ಪಂಚರಿಗೆ ಬರಮಾಡಿಕೊಂಡು ಬರಲು ತಿಳಿಸಿರುತ್ತೇನೆ. ಅದರಂತೆ ಸಚಿನ ಮತ್ತು ಅರವಿಂದ ಎಂಬ ಇಬ್ಬರು ವ್ಯಕ್ತಿಗಳನ್ನು ಬರಮಾಡಿಕೊಂಡು ಬಂದು ಪರಿಚಯ ಮಾಡಿಕೊಂಡು ಮಾಹಿತಿ ವಿಷಯ ತಿಳಿಸಿ ಸ್ಥಳೀಯರು ಪಂಚರಾಗಲು ನಿರಾಕರಿಸಿದಲ್ಲಿ ತಾವುದಾಳಿಗೆ ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡಾಗ ಸದರಿಯವರು ಒಪ್ಪಿಕೊಂಡ ಮೇರೆಗೆ ನಾನು ಸಿಬ್ಬಂದಿ ಮತ್ತು ಪಂಚರೊಂದಿಗೆ ಖಾಸಗಿ ವಾಹನದಲ್ಲಿ ತೆಗೆದುಕೊಂಡು ಭಾತ್ಮಿ ಸ್ಥಳಕ್ಕೆ ಹೊರಟೆವು. ನಾವು ಭಾತ್ಮಿ

ಸ್ಥಳಕ್ಕೆ ಹೋದಾಗ ಪಾನಶಾಪ ಅಂಗಡಿಯಲ್ಲಿರುವ ವ್ಯಕ್ತಿ ಸಮವಸ್ತ್ರದಲ್ಲಿರುವುದನ್ನು ನೋಡಿ ಓಡಿ ಹೋಗಿರುತ್ತಾನೆ. ಸಿಬ್ಬಂದಿ ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ನಂತರ ಸ್ಥಳದಲ್ಲಿ ಶೋಧನೆ ಸಮುಚ್ಚಿತ್ತ ತಯಾರಿಸಿ ಪಂಚರ ಸಮಕ್ಷಮ ಪಾನಶಾಪ ತಪಾಸಣೆ ಮಾಡಿ ನೋಡಿದಾಗ ಪಾನಶಾಪ ಒಳಗಡೆ ಒಂದು ಕಟ್ಟಿಗೆ ಪೆಟ್ಟಿಗೆ ಇದ್ದು ಅದರಲ್ಲಿ ಒಂದು ಲೀಟರಿನ 3 ಬಾಟಲಿಗಳು ಇದ್ದು ಪಂಚರ ಸಮಕ್ಷಮ ಅವುಗಳ ಮುಚ್ಚಳ ತೆಗೆದು ನೋಡಿದಾಗ ಅವುಗಳಲ್ಲಿ ಕಳ್ಳಬಟ್ಟಿ ಸಾರಾಯಿ ಇರುವುದು ಕಂಡುಬಂದಿರುತ್ತದೆ. ನಂತರ ಸ್ಥಳ ಪಂಚನಾಮೆ ಮಾಡಿರುತ್ತೇವೆ. ದೊರೆತ 3 ಬಾಟಲಿಗಳಿಂದ ಒಟ್ಟು 180 ML ನಷ್ಟು ಕಳ್ಳಬಟ್ಟಿ ಸಾರಾಯಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಶಾಂಪಲ ಅಂತ ತೆಗೆಯಲಾಯಿತು. ನಂತರ ಸ್ಥಳದಲ್ಲಿ ಮಾದರಿ ಮುದ್ರೆ ತಯಾರಿಸಲಾಯಿತು. ಚೆಕುಬಂದಿ ಪೂರ್ವಕ್ಕೆ ಅಫಜಲಪುರ ಹೊಸೂರು ರಸ್ತೆ, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಬಸ ನಿಲ್ದಾಣ ಇರುತ್ತದೆ. 7 ರಿಂದ 8 ಗಂಟೆಯವರೆಗೆ ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿ ಪಂಚರ ಸಹಿ ಪಡೆದಿರುತ್ತೇನೆ. ಮತ್ತು ದೊರೆತ ಮುದ್ದೆಮಾಲಿನೊಂದಿಗೆ ಕಚೇರಿಗೆ ಮರಳಿ ಮುಂದಿನ ತನಿಖೆಗಾಗಿ ಸರಕಾರಿ ತರಫೆ ದೂರು ನೀಡಿರುತ್ತೇನೆ. ಪ್ರ.ವ.ವ. ದಾಖಲಿಸಿರುತ್ತೇನೆ. ಮತ್ತು ದೊರೆತ ಮುದ್ದೆಮಾಲು ಮೇಲಾಧಿಕಾರಿಗಳಿಂದ ಪರವಾನಿಗೆ ಪಡೆದಿರುತ್ತೇನೆ. ಚಾಸಾ-7, 8 ರವರ ಹೇಳಿಕೆ ಪಡೆದಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ 4 ರವರಿಗೆ ಕಡತಗಳನ್ನು ವರ್ಗಾಯಿಸಿರುತ್ತೇನೆ.

ಸಾಕ್ಷಿಗೆ ಶೋದನಾ ಸಮುಚ್ಚಿತ್ತ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**4** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ **4(**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಪಿ-**3** ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**3**(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸರಕಾರಿ ತರಫೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-**5** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**5**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಪ್ರ.ವ.ವ. ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-**6** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**6**(ಎ) ಎಂದು ಗುರುತಿಸಲಾಯಿತು.

ಹಿರಿಯ ಅಧಿಕಾರಿಗಳಿಂದ ಪಡೆದ ಅನುಮತಿ ಪತ್ರ ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ **7** ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ 180 ML ನ ಒಂದು ಗಾಜಿನ ಬಾಟಲನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **D.K.** ವಕೀಲರಿಂದಃ-

ಅಫಜಲಪುರದಿಂದ ಶಿರವಾಳ 12 ಕಿ.ಮಿ. ದೂರ ಇರುತ್ತದೆ. ಪಂಚರಿಗೆ ನಮ್ಮ ಸಿಬ್ಬಂದಿ ಕರೆದುಕೊಂಡು ಬಂದಿರುತ್ತಾರೆ. ಪಂಚರು ನಮ್ಮ ಕಚೇರಿ ಎಲ್ಲಾ ಪ್ರಕರಣಗಳಲ್ಲಿ ಪಂಚ ಸಾಕ್ಷಿಯಾಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ವಾಹನ ನೋಡಿ ಓಡಿ ಹೋಗಿರುತ್ತಾನೆ. ವಾಹನ ಸಂಃ KA 32 D 3308 ಇರುತ್ತದೆ. ಆರೋಪಿತನು ಪಶ್ಚಿಮ ದಿಕ್ಕಿಗೆ ಓಡಿಹೋಗಿರುತ್ತಾನೆ. ಖಾಸಗಿ ವಾಹನದಲ್ಲಿ ನಾವು ಹೋಗುತ್ತಿರುವುದು ಸಾಮಾನ್ಯವಾಗಿ ಗೊತ್ತಾಗುವುದಿಲ್ಲ ಎಂದರೆ ಆರೋಪಿ ನಮ್ಮ ಸಮವಸ್ತ್ರ ನೋಡಿ ಓಡಿ ಹೋಗಿರುತ್ತಾನೆ. ಮು.ಮಾ. 1 ರಂತೆ ಬಾಟಲಿಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗೆ ತನಿಖಾಧಿಕಾರಿಗಳು ಕಳುಹಿಸಿರುತ್ತಾರೆ. ಗುನ್ಹೆಸ್ಥಳದಲ್ಲಿ 7 ರಿಂದ 8 ರವರೆಗೆ ಇದ್ದೆವು. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಚೆಕ್ಕುಬಂದಿ ಸರಿಯಲ್ಲ ಎಂದು ಸೂಚಿಸುವುದು ಸರಿಯಲ್ಲ. ಪಾನಶಾಪ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಜಪ್ತಿ ಸಮಯದಲ್ಲಿ ಭಾವಚಿತ್ರ ತೆಗೆದಿಲ್ಲ.

ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಚೇರಿ ಅಂಕಿ ಸಂಖ್ಯೆ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ.

ಚಾಸಾ- 3 ಪ್ರಾಸಾ- 4

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು

ಅಫಜಲಪೂರ